**1. new OS No. 56-2022 cross-examination of PW 1.doc**

<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ</u>

<u>ದಂಡಾಧಿಕಾರಿಗಳ ನ್ಯಾಯಾಲಯ, ನಾಗಮಂಗಲ.</u>

ಅಸಲು ದಾವಾ ಸಂಖ್ಯೆ. **56/2022**
**PW -1**
**P W-1**

ಸಾಕ್ಷಿಗೆ ದಿನಾಂಕಃ 18.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ SL ಪ್ರತಿವಾದಿಯರ ಪರ ವಕೀಲರಿಂದ

ನನ್ನ ತಾತನ ಹೆಸರು ರಂಗೇಗೌಡ . ರಂಗೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ರಂಗೇಗೌಡರಿಗೆ ಒಟ್ಟು ಇಬ್ಬರು ಹೆಂಡತಿಯರು, ನನ್ನ ತಂದೆ ಮತ್ತು ನಮ್ಮ ಚಿಕ್ಕಪ್ಪ ಲಕ್ಷ್ಮಣ ಮೊದಲನೆ ಹೆಂಡತಿ ಮಕ್ಕಳು, 2 ನೇ ಹೆಂಡತಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ನನ್ನ ತಾತಾ ರಂಗೇಗೌಡರ ಜೊತೆ ಒಡಹುಟ್ಟಿದವರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಅಸಲು ದಾವ ಸಂಖ್ಯೆ 1112/1950-51 ರಲ್ಲಿ ನನ್ನ ತಾತಾ ಮತ್ತು ಅವರ ಸಹೋದದರ ನಡುವೆ ವಿಭಾಗದ ದಾವೆಯು ನಡೆದಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯಲ್ಲಿ ನನ್ನ ತಾತಾ ರಂಗೇಗೌಡ ಮತ್ತು ಅವರ ಸಹೋದದರರ ನಡುವೆ ಆಸ್ತಿಗಳು ಹಂಚಿಕೆಯಾಗಿರುತ್ತದೆ. ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನಿಗೆ ಒಂದು ಪಾಲನ್ನು ನೀಡಲಾಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ಬಂದ ಸ್ವತ್ತುಗಳನ್ನು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವಿಭಾಗ ಮಾಡಿಕೊಂಡರು ಎಂದರೆ ಸರಿ. ಸದರಿ ವಿಭಾಗದಲ್ಲಿ ಯಾರ್ಯಾರಿಗೆ ಯಾವ

ಸರ್ವೆ ನಂಬರಿನ ಮತ್ತು ಎಷ್ಟು ವಿಸ್ತೀರ್ಣ ಜಮೀನು ಹಂಚಿಕೆಯಾಗಿದೆ ಎಂದು ವಾದ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಹಿಸ್ಸೆಗೆ ಬಂದಿರುವ ಜಮೀನುಗಳ ಬಗ್ಗೆ ಹೇಳಿರುವುದಾಗಿ ನುಡಿಯುತ್ತಾರೆ.

2. ದಾವಾ ಆಸ್ತಿಗಳು ನನ್ನ ತಂದೆ ಹೆಸರಿಗೆ ಯಾವ ವರ್ಷದಲ್ಲಿ ಬಂದವು ಎಂದು ನನಗೆ ಹೇಳಲು ಆಗುವುದಿಲ್ಲ . ಸಾಕ್ಷಿಯು ಮುಂದುವರೆದು ಈಗಲೂ ಸಹಾ ಕೆಲವು ದಾಖಲೆಗಳು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನವರ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿರುವುದಾಗಿ ನುಡಿಯುತ್ತಾರೆ. ಜಂಟಿಯಾಗಿ ಬರುತ್ತಿರುವ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಜಂಟಿಯಾಗಿ ಬರುತ್ತಿರುವ ಜಮೀನುಗಳಲ್ಲಿ ನನಗೆ ಭಾಗದ ಹಕ್ಕು ಇದೆ ಎಂದರೆ ಸರಿ.

3. ವಿಭಾಗದ ಪ್ರಕಾರ ನನ್ನ ತಂದೆಯ ಹೆಸರಿಗೆ ಮತ್ತು ನನ್ನ ಚಿಕ್ಕಪ್ಪನ ಹೆಸರಿಗೆ ದಾಖಲೆಗಳು ಬರುತ್ತಿರುವ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನನ್ನ ತಂದೆ ಹೆಸರಿನಲ್ಲಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಾಗಿ ನುಡಿಯುತ್ತಾರೆ.

4. ವಿಭಾಗದ ಪ್ರಕಾರ ಬಂದ ತಮ್ಮ ಜಮೀನುಗಳ ಪೈಕಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ಬಂದ ಬೇರೆಯವರಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಚಿಕ್ಕಪ್ಪ ತನ್ನ ಹಿಸ್ಸೆಗೆ ಬಂದ ಜಮೀನನ್ನು ಹಾಗೂ ನನ್ನ ಅಣ್ಣ ಆರ್. ವಿಜಯ್ ಕುಮಾರ್ ರವರು ನನ್ನ ತಂದೆ ಹಿಸ್ಸೆಗೆ ಬಂದ ಜಮೀನು ಮಾರಾಟ ಮಾಡಿರುತ್ತಾರೆ, ನನ್ನ ತಂದೆ ತನ್ನ

ಹಿಸ್ಸೆಗೆ ಬಂದ ಯಾವುದೇ ಜಮೀನನ್ನು ಮಾರಾಟ ಮಾಡಿರಲಿಲ್ಲ ಎಂದು ನುಡಿಯುತ್ತಾರೆ.

5. ನನ್ನ ಅಣ್ಣ ತುಮಕೂರಿನಲ್ಲಿ 2 ಎಕರೆ ಜಮೀನನ್ನು , ನಾಗಮಂಗಲದ ದೊಡ್ಡ ಜಟಕದಲ್ಲಿ 35 ಗುಂಟೆ ಜಮೀನನ್ನು ಮತ್ತು ಬೆಂಗಳೂರಿನಲ್ಲಿ 1 ನಿವೇಶನವನ್ನು ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತುಗಳ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಕ್ರಯ ಪತ್ರಗಳಿಗೆ ನಾನು ಮತ್ತು ನನ್ನ ಸಹೋದರಿಯರು ಸಹಿ ಮಾಡಿರುತ್ತೇವೆ. ಆ ರೀತಿ ಕ್ರಯ ಮಾಡುವ ಸಂದರ್ಭದಲ್ಲಿ ನಮ್ಮ ಸಹೋದರರ ಮತುತ ಸಹೋದರಿಯರ ನಡುವೆ ಆಸ್ತಿಗಳು ವಿಭಾಗ ಆಗಿದ್ದವು ಎಂದರೆ ಸರಿಯಲ್ಲ.

6. ನನ್ನ ತಂದೆ ಹಿಸ್ಸೆಗೆ ದೊಡ್ಡ ಜಟಕ ಗ್ರಾಮದ ಸರ್ವೆ ನಂ.31/2 ರಲ್ಲಿ 1 ಎಕರೆ 24 ಗುಂಟೆ , ಸರ್ವೆ ನಂ 32/ಬಿ ರಲ್ಲಿ 21-1/2 ಗುಂಟೆ ಪೈಕಿ 11 ಮುಕ್ಕಾಲು ಗುಂಟೆ , ಸರ್ವೆ ನಂ 39/3 ರಲ್ಲಿ 14-1/2 ಗುಂಟೆ, ಸರ್ವೆ ನಂ 83/2 ಬಿ ರಲ್ಲಿ 5 ಗುಂಟೆ, ಸರ್ವೆ ನಂ 98/2 ರಲ್ಲಿ35 ಗುಂಟೆ ಸರ್ವೆ ನಂ 104/7 ರಲ್ಲಿ 6 ಗುಂಟೆ ಪೈಕಿ 3 ಗುಂಟೆ , ಸರ್ವೆ ನಂ 105/2 ಎ 2 ರಲ್ಲಿ 25 ಗುಂಟೆ ಪೈಕಿ 12-ವರೆ ಗುಂಟೆ , ಕಾಡು ಮಂಚೇನಹಳ್ಳಿ ಗ್ರಾಮದ ಸರ್ವೆ ನಂ 5/2 ರಲ್ಲಿ 27 ಗುಂಟೆ , ಮಲ್ಲಸಂದ್ರ ಕಾವಲು ಗ್ರಾಮದ ಸರ್ವೆ ನಂ 6/1 ಬಿ ರಲ್ಲಿ 7 ಗುಂಟೆ ಪೈಕಿ 3-ವರೆ ಗುಂಟೆ , ಸರ್ವೆ ನಂ 7/3 ಬಿ ರಲ್ಲಿ 9 ಗುಂಟೆ ಪೈಕಿ 4 -ವರೆ ಗುಂಟೆ , ಸರ್ವೆ ನಂ 7/6 ಬಿ ರಲ್ಲಿ9 ಗುಂಟೆ ಪೈಕಿ 4-ವರೆ ಗುಂಟೆ , ಸರ್ವೆ ನಂ 7/10 ಬಿ ರಲ್ಲಿ 7 ಗುಂಟೆ ಪೈಕಿ 3-ವರೆ ಗುಂಟೆ ಮತ್ತು ಸರ್ವೆ ನಂ 23 ರಲ್ಲಿ 3 ಗುಂಟೆ ಪೈಕಿ 1-ವರೆ ಗುಂಟೆ ,ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಬರಬೇಕಾಗಿತ್ತು

ಆದರೆ ಕೆಲವು ಜಮೀನುಗಳ ಪಹಣಿ ಪತ್ರಿಕೆಗಳು ನನ್ನ ತಂದೆಯ 2 ನೇ ಹೆಂಡತಿಯ ಮಕ್ಕಳ ಹೆಸರಿನಲ್ಲಿ ಬರುತ್ತಿರುವುದಾಗಿ ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

ಮರುವಿಚಾರಣೆ ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

ನನ್ನ ಸಮಕ್ಷಮ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ, ನಾಗಮಂಗಲ.